ಕನಕಪುರ ತಾಲ್ಲೂಕು ಹಾರೋಬೆಲೆ ಯೋಜನೆಯ ಪ್ರಗತಿ

೮೭೧. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಿಲ್ಲೆ ಕನಕಪುರ ತಾಲ್ಲೂಕು ಹಾರೋಬೆಲೆ ಯೋಜನೆಗೆ ಇದುವರೆವಿಗೆ ಖರ್ಚಾಗಿರುವ ಹಣವೆಷ್ಟು ?

ಆ) ಈ ವರ್ಷ ಎಷ್ಟು ಹಣವನ್ನು ಈ ಯೋಜನೆಗಾಗಿ ಒದಗಿಸಿದೆ ?

ಇ) ಎಷ್ಟು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವುದು ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮಾರ್ಚ್ ೬೦ರ ಅಂತ್ಯದವರೆಗೆ ೫೩೪ ಲಕ್ಷ ರೂ.ಗಳು

ಆ) ೫೦೦ ಲಕ್ಷ ರೂ.ಗಳು

ಇ) ಎಂಟನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ

ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯಲ್ಲಿ ಮುಳುಗಡೆಯಾದ ರೈತರ ಆಸ್ತಿ ಪಾಸ್ತಿಗಳಿಗೆ ಪರಿಹಾರ

೮೭೨. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯ ಅಡಿಯಲ್ಲಿ ಮುಳುಗಡೆಯಾದ ರೈತರಿಗೆ ಪರಿಹಾರ ನೀಡಲಾಗಿದೆಯೇ ?

ಆ) ನೀಡಿದ್ದಲ್ಲಿ ಎಷ್ಟು ರೈತ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿದೆ ?

ಇ) ಈ ಪರಿಹಾರ ಹಣದ ಮೊತ್ತವೆಷ್ಟು ಹಾಗೂ ಈ ಪರಿಹಾರವನ್ನು ಯಾವಾಗ ನೀಡಲಾಯಿತು ?

ಈ) ಇದರಿಂದ ಈ ಭಾಗದ ರೈತರಿಗೆ ಅಸಮಾಧಾನವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ನೀಡಲಾಗಿದೆ.

ಆ) ೩,೪೭೦ ಕುಟುಂಬಗಳಿಗೆ

ಇ) ೧೧.೪೩ ಕೋಟಿ ರೂ.ಗಳು ಹಾಗೂ ೧೯೮೫–೮೬ನೇ ಸಾಲಿನವರೆಗೆ

ಈ) ಬಂದಿದೆ.

ಉ) ರೈತರ ಅಸಮಾಧಾನ ಹಾಗೂ ಸಮಸ್ಯೆಗಳನ್ನು ಪುನರ್ವಸತಿ ಸಮಿತಿಯಲ್ಲಿ ರಚಿಸಿ ಸೂಕ್ತ ಪರಿಹಾರ ಒದಗಿಸಲಾಗಿದೆ.

ಇತ್ತೀಚಿನ ಬೆಲೆ ಏರಿಕೆಯಿಂದ ಸಾರಿಗೆ ಸಂಸ್ಥೆಗೆ ಪ್ರತಿನಿತ್ಯ ಬರುತ್ತಿರುವ ಹೆಚ್ಚಿನ ಆದಾಯ

೮೭೩. ಶ್ರೀ ಪಿ. ಜಿ. ಆರ್. ಸಿಂಧ್ಯ, (ಕನಕಪುರ) —ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರಿಗೆ ಸಂಸ್ಥೆಗೆ ಪ್ರತಿದಿನ ಬರುತ್ತಿರುವ ಆದಾಯವೆಷ್ಟು ?

ಆ) ಇತ್ತೀಚಿನ ಬೆಲೆ ಏರಿಕೆಯಿಂದಾಗಿ ಸಾರಿಗೆ ಸಂಸ್ಥೆಗೆ ಬರುತ್ತಿರುವ ಪ್ರತಿದಿನದ ಆದಾಯವು ಹೆಚ್ಚಿದೆಯೇ ?

ಇ) ಹಾಗಿದ್ದರೆ ಎಷ್ಟು ? (ಡಿವಿಜನ್‌ವಾರು ವಿವರಗಳನ್ನು ಕೊಡುವುದು)

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ೧೫೦.೦೦ ಲಕ್ಷ ರೂಪಾಯಿಗಳು

ಆ) ಹೌದು

ಇ) ವಿವರಗಳು ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ವಿಭಾಗಗಳು	ದೈನಂದಿನ ಸರಾಸರಿ ಆದಾಯ (ಲಕ್ಷ ರೂ. ಗಳಲ್ಲಿ)
೧	ಬಿ. ಟಿ. ಎಸ್.	೪.೭೮
೨	ಬೆಂಗಳೂರು	೩.೨೪
೩	ಕೋಲಾರ	೧.೭೮
೪	ಮೈಸೂರು	೨.೦೬
೫	ಹಾಸನ	೨.೯೬
೬	ಮಂಗಳೂರು	೧.೭೫
೭	ಸಿರ್ಸಿ	೨.೦೦
೮	ಹುಬ್ಬಳ್ಳಿ	೨.೮೫
೯	ಬೆಳಗಾವಿ	೩.೦೧
೧೦	ವಿಜಾಪುರ	೧.೮೭
೧೧	ಗುಲ್ಬರ್ಗ	೨.೧೨
೧೨	ರಾಯಚೂರು	೦.೮೬
೧೩	ಬಳ್ಳಾರಿ	೧.೬೫

ಮೂಡಿಗೆರೆ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ

*೬೬೯. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿರುವ ದೊಡ್ಡ ಹಾಗೂ ಸಣ್ಣ ಪ್ರಮಾಣದ ಕೆರೆಗಳ ಸಂಖ್ಯೆ ಎಷ್ಟು?

ಆ) ಈ ಕೆರೆಗಳಿಂದ ಎಷ್ಟು ಆಚ್ಚುಕಟ್ಟು ಪ್ರದೇಶಗಳಿಗೆ ನೀರು ಒದಗಿಸಲಾಗುತ್ತದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು)—

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ದೊಡ್ಡ ಪ್ರಮಾಣದ ಕೆರೆಗಳು ಯಾವುದೂ ಇಲ್ಲ. ಸಣ್ಣ ಪ್ರಮಾಣದ ೨೦೦ ಹೆಕ್ಟೇರುಗಳಿಗಿಂತ ಕಡಿಮೆ ಆಚ್ಚುಕಟ್ಟು ಇರುವ ಕೆರೆಗಳು ೨೦೬ ಇವೆ.

ಆ) ಈ ಕೆರೆಗಳಿಂದ ಮೂಡಿಗೆರೆ ತಾಲ್ಲೂಕಿನಲ್ಲಿ ೨೪೦೩ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯ ಸೌಲಭ್ಯವನ್ನು ಒದಗಿಸಲಾಗಿದೆ.